ಈ ದಾವೆಯಲ್ಲಿ ಆಗಿರುವ ದಿನಾಂಕ **06.09.2021** ರ ತೀರ್ಪು ಮತ್ತು ಡಿಕ್ರಿ ಇದೇ ನ್ಯಾಯಾಲಯದ ಮಿಸಲೇನಿಯಸ್ ನಂಬರ **49/2022** ರ ದಿನಾಂಕ **18.08.2022** ರ ಆದೇಶದ ಮೇರೆಗೆ ರದ್ದಾಗಿದ್ದು, ಈ ಕಾರಣದಿಂದ ದಾವೆಯನ್ನು ಪುನಃ ವಿಚಾರಣೆಗೆ ತೆಗೆದುಕೊಂಡು ಸಾಕ್ಷಿಯ ಮುಂದುವರೆದ ವಿಚಾರಣೆಗೆ ಈ ದಿನ ದಿನಾಂಕ **15.01.2025** ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್ ಎಸ್ ಎಮ್, ವಕೀಲರಿಂದಃ ವಾದಿಯ ಪರವಾಗಿಃ**

ನನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಅಕೌಂಟ ಎಕ್ಸಟ್ರೆಕ್ಟ ದಾಖಲೆಯ ದೃಢಿಕೃತ ನಕಲು ಮತ್ತು ಕ್ರಿಮಿನಲ್ ಪೆಟಿಶನ್ ನಂಬರ **103217/2022** ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದ ದಿನಾಂಕ **31.10.2022** ರ ಆದೇಶದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಪಿ-**12** ಮತ್ತು ನಿಪಿ-**13** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಈಗಾಗಲೇ ಹಾಜರು ಪಡಿಸಿರುವ ನಿಪಿ-**1** ಮತ್ತು ನಿಪಿ-**2** ನ್ನು ನಿಶಾನೆಯನ್ನಾಗಿ ಗುರುತಿಸುವ ಬಗ್ಗೆ ಅವುಗಳು ಕಾನೂನು ಪ್ರಕಾರ ನಿಶಾನೆಯನ್ನಾಗಿ ಗುರುತಿಸುವ ದಾಖಲೆಗಳು ಅಲ್ಲ ಎಂದು ತಕರಾರನ್ನು ಮಾಡಿರುತ್ತಾರೆ. ಆದರೆ ಸದರಿ ದಾಖಲೆಗಳನ್ನು ಈಗಾಗಲೇ ನಿಶಾನೆಯನ್ನಾಗಿ ಗುರುತಿಸಲಾಗಿದ್ದು, ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ಸದರಿ ದಾಖಲೆಗಳ ರುಜುವಾತಿನ ಬಗ್ಗೆ ತಕರಾರನ್ನು ಈ ದಾವೆಯ ವಾದದ ಸಮಯದಲ್ಲಿ ಪರಿಗಣಿಸುವಂತೆ ಮುಕ್ತವಾಗಿರಿಸಿ, ಪ್ರತಿವಾದಿ ಪರ ವಕೀಲರ ತಕರಾರನ್ನು ಈ ಹಂತದಲ್ಲಿ ಪರಿಗಣಿಸಿಲ್ಲ.)

**ಮುಂದುವರೆದ ವಾಟೀಸವಾಲುಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ ಪ್ರತಿವಾದಿಯ ಪರವಾಗಿಃ**

ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.